ನಗರ ಪಾಲಿಕೆಯ ಅಧಿಕಾರಿಗಳ ಮೇಲೆ ಹೊಸದಾಗಿ ವಿಚಾರಣೆ ನಡೆಸಲು ಮಹಾನಗರ ಪಾಲಿಕೆಯು ಆಯುಕ್ತರು ಆದೇಶ ನೀಡಿದ್ದು ಇದಕ್ಕೆ ಉಚ್ಚ ನ್ಯಾಯಾಲಯದಿಂದ ತಡೆಯಾಜ್ಞೆ ಬಂದಿರುತ್ತದೆ.

ಇ) ಅಂದಾಜು ಈ ದುರಂತದಲ್ಲಿ 120 ಜನರು ಪ್ರಾಣ ಕಳೆದುಕೊಂಡರು. ಮತ್ತು 50 ಜನರು ಗಾಯಗೊಂಡರು.

ಕಾರ್ಮಿಕ ನಷ್ಟ ಪರಿಹಾರ ಕಾಯ್ದೆಯಡಿಯಲ್ಲಿ ಆಯುಕ್ತರ ಕಛೇರಿಯಲ್ಲಿ ಪರಿಹಾರಕ್ಕಾಗಿ 48 ಅರ್ಜಿಗಳು ದಾಖಲಾಗಿವೆ. ಈವರೆಗೆ ಎರಡು ಪ್ರಕರಣಗಳಲ್ಲಿ ಕ್ರಮವಾಗಿ 21,000–00 ಮತ್ತು 16,800–00 ರೂ. ಗಳ ಪರಿಹಾರವನ್ನು ಘೋಷಿಸಲಾಗಿದೆ. 5 ಮಂದಿ ಅರ್ಜಿದಾರರು ತಮ್ಮ ಪ್ರಕರಣಗಳನ್ನು ವಾಪಸ್ಸು ಪಡೆದಿರುತ್ತಾರೆ. 3 ಪ್ರಕರಣಗಳನ್ನು ಅರ್ಜಿದಾರರು. ಹಾಜರಾಗದ ಪ್ರಯುಕ್ತ ಮತ್ತು ದಾಖಲಾತಿಗಳನ್ನು ಒದಗಿಸದ ಪ್ರಯುಕ್ತ ವಜಾ ಮಾಡಲಾಗಿದೆ. ಉಳಿದ 38 ಪ್ರಕರಣಗಳು ಕಾರ್ಮಿಕ ನಷ್ಟ ಪರಿಹಾರ ಕಛೇರಿಯಲ್ಲಿ ವಿಚಾರಣಾ ಹಂತದಲ್ಲಿವೆ.

ವಿಷಯ :– ಸಕಲೇಶಪುರದಲ್ಲಿ ಸರ್ಕಾರಿ ಕಾಲೇಜು ಕಟ್ಟಡದ ಪ್ರಾರಂಭ.

ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ 585 (1210)

ಶ್ರೀ ಬಿ. ಆರ್. ಗುರುದೇವ್ (ಸಕಲೇಶಪುರ) :– ಮಾನ್ಯ ಶಿಕ್ಷಣ ಮತ್ತು ಸಂಸದೀಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಹಾಸನ ಜಿಲ್ಲೆ, ಸಕಲೇಶಪುರದಲ್ಲಿ ಸರ್ಕಾರಿ ಕಾಲೇಜು ಇಲ್ಲದೆ ಇಲ್ಲಿರುವ ಸುತ್ತಮುತ್ತ ಹಳ್ಳಿಯ ಜನತೆ ಕಾಲೇಜುಗಳಿಗೆ ಹೊರ ಜಿಲ್ಲೆಗಳಿಗೆ ಹೋಗಿ ವಿದ್ಯಾಭ್ಯಾಸ ಮಾಡುತ್ತಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಸಾರ್ವಜನಿಕರ ಉದ್ವೇಶ ಮೇರೆಗೆ ಈ 91–92 ನೇ ಸಾಲಿನಲ್ಲಿ ಕಾಲೇಜು ಆಗುವ ನಿರೀಕ್ಷೆ ಇದೆಯೇ ?

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಮಂತ್ರಿಗಳು) :–

ಅ) 1983–84 ನೇ ಸಾಲಿನಲ್ಲಿ ಹೊಸದಾಗಿ ಹಾಸನ ಜಿಲ್ಲೆಯ ಸಕಲೇಶಪುರದಲ್ಲಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜನ್ನು ಅಲ್ಲಿಯ ಸುತ್ತಮುತ್ತದಲ್ಲಿಯ ಅಭ್ಯರ್ಥಿಗಳ ಹಿತಕ್ಕಾಗಿ ಪ್ರಾರಂಭಿಸಿದೆ.

ಆ) ಉದ್ಭವಿಸುವುದಿಲ್ಲ.

ವಿಷಯ :– ಬೈಂದೂರು ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಕಟ್ಟಡ ರಚನೆಗೆ ತಯಾರಾದ ಅಂದಾಜು ಪಟ್ಟಿ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 586 (1015)

ಶ್ರೀ ಜಿ. ಎಸ್. ಆಚಾರ್ :– (ಬೈಂದೂರು) ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ದಕ್ಷಿಣ ಕನ್ನಡ ಜಿಲ್ಲೆಯ ಬೈಂದೂರು ಪ್ರಥಮ ದರ್ಜೆ ಕಾಲೇಜು ಕಟ್ಟಡ ರಚನೆಗೆ ತಯಾರಾದ ಅಂದಾಜು ಪಟ್ಟಿಯ ಮೌಲ್ಯವೆಷ್ಟು ?

ಆ) ಈ ತನಕ ಎಷ್ಟು ಹಣ ವ್ಯಯವಾಗಿದೆ.

ಇ) ಇನ್ನು ಉಳಿದ ಅವಶ್ಯಕ ಕಟ್ಟಡ ನಿರ್ಮಾಣಕ್ಕೆ ಸರ್ಕಾರದ ಯೋಜನೆ ಏನು ?

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಮಂತ್ರಿಗಳು) :–

ಅ) ರೂ. 13.10 ಲಕ್ಷಗಳು

ಆ) ರೂ. 6.86 ಲಕ್ಷಗಳು

ಇ) 1991–92 ನೇ ಸಾಲಿನಲ್ಲಿ ಉಳಿದ ಹಣವನ್ನು ಒದಗಿಸಲು ಕ್ರಮ ಕೈಗೊಳ್ಳಲಾಗುವುದು.